ಕರ್ನಾಟಕ ವಿಧಾನ ಸಭೆ

486 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.

ಮಾನ್ಯ ಮುಖ್ಯಮಂತ್ರಿಯವರು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಅರಣ್ಯ ವಿಸ್ತೀರ್ಣ ಪ್ರದೇಶಗಳೆಷ್ಟು (ವಿವರ ಒದಗಿಸುವುದು);

ಗೌರಿಬಿದನೂರು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಈ ಕೆಳಗಿನಂತಿದೆ:

ಕ್ರಮ ಸಂಖ್ಯೆ	ಅರಣ್ಯ ಪ್ರದೇಶ	ವಿಸ್ತೀರ್ಣ (ಎಕರೆಗಳಲ್ಲಿ)
1	ಎಮ್ಮೆಗುಡ್ಡ ಎಸ್.ಎಫ್.	3096.05
2	ವಲಸೇಬೆಟ್ಟ ಎಸ್.ಎಫ್.	1979.34
3	ಗೆದರೆ ಎಸ್.ಎಫ್.	1353.10
4	ಕುರುಡಿ ಎಸ್.ಎಫ್.	2200.03
5	ಬೊಮ್ಮಶೆಟ್ಟಿಹಳ್ಳಿ ಮೈನರ್ ಫಾರೆಸ್ಟ್	430.26
	ಒಟ್ಟು	**9058.78**

ಆ) ಈ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯವರು ಯಾವ ಯಾವ ಯೋಜನೆಗಳನ್ನು ರೂಪಿಸಿಕೊಂಡು ಅಭಿವೃದ್ಧಿಪಡಿಸುತ್ತಿರುವರು;

ಈ ಪ್ರದೇಶಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಿಕೊಂಡು ಕಳೆದ ಎರಡು ವರ್ಷಗಳಲ್ಲಿ ಅರಣ್ಯ ಅಭಿವೃದ್ಧಿಪಡಿಸಲಾಗಿದೆ ಹಾಗೂ 2009–10ರಲ್ಲಿ ಅಭಿವೃದ್ಧಿ ಕಾರ್ಯ ಮುಂದುವರಿಸಿದೆ:

ಕ್ರ ಸಂ:	ವರ್ಷ	ಅರಣ್ಯದ ಹೆಸರು	ಯೋಜನೆ ಹೆಸರು	ವಿಸ್ತೀರ್ಣ (ಹೆ.ಗಳಲ್ಲಿ)
1	2007–08	ಎಮ್ಮೆಗುಡ್ಡ ಎಸ್.ಎಫ್.	ರಾಷ್ಟ್ರೀಯ ಅರಣ್ಯೀಕರಣ ಯೋಜನೆ	50.00
2		ಕುರುಡಿ ಎಸ್.ಎಫ್.	ರಾಷ್ಟ್ರೀಯ ಅರಣ್ಯೀಕರಣ ಯೋಜನೆ	25.00
3		ಮಲ್ಲಸಂದ್ರ (ಗೆದರೆ ಎಸ್.ಎಫ್)	ಕ್ಷೀಣಿತ ಅರಣ್ಯ ಅಭಿವೃದ್ಧಿ	25.00
4		ಎಮ್ಮೆಗುಡ್ಡ ಎಸ್.ಎಫ್.	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	25.00
			ಒಟ್ಟು	**125.00**

1	2008–09	ಎಮ್ಮೆಗುಡ್ಡ ಎಸ್.ಎಫ್.	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	65.00
2		ಮಲ್ಲಸಂದ್ರ (ಗೆದರೆ ಎಸ್.ಎಫ್)	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	75.00
3		ಕುರುಡಿ ಎಸ್.ಎಫ್.	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	25.00
			ಒಟ್ಟು	**165.00**
1	2009–10	ಮಲ್ಲಸಂದ್ರ (ಗೆದರೆ ಎಸ್.ಎಫ್)	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	50.00
2		ಎಮ್ಮೆಗುಡ್ಡ ಎಸ್.ಎಫ್.	ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ	75.00
			ಒಟ್ಟು	**125.00**
			ಜುಮ್ಲಾ	**415.00**

ಇ) ಅನೇಕ ಬಡ ರೈತರುಗಳು ಭೂಮಿ ಇಲ್ಲದೇ ಅರಣ್ಯ ಪ್ರದೇಶದ ಭೂಮಿಯಲ್ಲಿಯೇ ಕುಟುಂಬದ ಜೀವನೋಪಾಯಕ್ಕೆ ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಾ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಒಟ್ಟು 104 ಕುಟುಂಬದವರು 212.30 ಎಕರೆ ಅರಣ್ಯ ಪ್ರದೇಶವನ್ನು ದಿನಾಂಕ: 27–4–1978ರ ನಂತರ ಒತ್ತುವರಿ ಮಾಡಿಕೊಂಡಿರುತ್ತಾರೆ.

ಈ) ಹಾಗಿದ್ದಲ್ಲಿ, ಈ ರೈತರುಗಳಿಗೆ ಸರ್ಕಾರವು ರೂಪಿಸಿಕೊಂಡಿರುವ ಯೋಜನೆಗಳೇನು?

ದಿನಾಂಕ: 15–5–1996ರ 8–50/96 ಎಫ್.ಸಿ. ನೇ ಸಂಖ್ಯೆಯ ಪತ್ರದಲ್ಲಿ ಕೇಂದ್ರ ಸರ್ಕಾರವು ಮತ್ತು ದಿನಾಂಕ: 5–5–1997ರ ಎಫ್ಇಇ 5 ಎಫ್‌ಜಿಎಲ್ 90ನೇ ಸಂಖ್ಯೆಯ ಆದೇಶದಲ್ಲಿ ಕರ್ನಾಟಕ ಸರ್ಕಾರವು ನೀಡಿರುವ

ನಿರ್ದೇಶನಗಳಂತೆ ದಿನಾಂಕ: 27–4–1978ರ ನಂತರದ ಅರಣ್ಯ ಅತಿಕ್ರಮಣಗಳನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಭಾರತ ಸರ್ವೋಚ್ಚ ನ್ಯಾಯಾಲಯವು 202/1995ರ ರಿಟ್ ಅರ್ಜಿ ದಾವೆಯ 703 ಐ.ಎ.ಗೆ ಸಂಬಂಧಿಸಿದಂತೆ ದಿನಾಂಕ: 3–5–2002ರ ತೀರ್ಪಿನಲ್ಲಿ ದಿನಾಂಕ: 27–4–1978ರ ನಂತರದ ಎಲ್ಲಾ ಅರಣ್ಯ ಅತಿಕ್ರಮಣಗಳನ್ನು ತೆರವುಗೊಳಿಸುವಂತೆ ಸಹ ಹೇಳಿದೆ.

ಆದುದರಿಂದ ಈ ಅತಿಕ್ರಮದಾರರಿಗೆ ಬದಲಿ ವ್ಯವಸ್ಥೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭೆ

588 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) ಬನಹಟ್ಟಿ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ.

ಬಂದಿದೆ.

ಕೃಷ್ಣಾ ನದಿ ಮೂಲದಿಂದ ನೀರು ಸರಬರಾಜು ಕೈಗೊಳ್ಳಲು ರೂ.17.18 ಕೋಟಿಗಳಿಗೆ ವಿವರವಾದ ಯೋಜನಾ ವರದಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ತಯಾರಿಸಿದ್ದು, ಈ ಯೋಜನೆಯ ಅಂದಾಜು ಪತ್ರಿಕೆಗೆ ಒಪ್ಪಿಗೆ ಸೂಚಿಸಿ ಮೇಲು ರುಜು ಮಾಡಲು ಹಾಗೂ ಅವಶ್ಯ ಠರಾವನ್ನು ಕಳುಹಿಸಲು ಸ್ಥಳೀಯ ಸಂಸ್ಥೆಯನ್ನು (ರಬಕವಿ–ಬನಹಟ್ಟಿ ನಗರ ಸಭೆ) ಕೋರಲಾಗಿದೆ.

ಆ) ಹಾಲಿ ಇರುವ ಯೋಜನೆ 45 ವರ್ಷಗಳಷ್ಟು ಹಿಂದಿನದ್ದಾಗಿದ್ದು, ಜನಸಂಖ್ಯೆ ಹತ್ತಾರು ಪಟ್ಟು ಬೆಳೆದಿರುವುದರಿಂದ ಹೊಸ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಿಂದ ಸೂಕ್ತ ಪ್ರಸ್ತಾವನೆಯನ್ನು ಪಡೆದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗುವುದು ತದನಂತರ ಈ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಇ) ತುರ್ತು ಅಗತ್ಯವಿರುವುದರಿಂದ ಸದರೀ ಯೋಜನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?